# ಕಥೋಪದೇಶ

## ಗರ್ವಭಂಗ

ಒಂದು ಊರಿನಲ್ಲಿ ಸುಂದರವಾದ ದೇವಸ್ಥಾನ. ಪೂಜಾರಿಯು ಆ ದೇವಸ್ಥಾನವನ್ನು ನಿತ್ಯ ಗುಡಿಸಿ, ತೊಳೆದು ಚೊಕ್ಕಟವಾಗಿ ಇಡುತ್ತಿದ್ದನು. ದೇವಸ್ಥಾನದ ಮೇಲ್ಭಾಗದಲ್ಲಿ ಫಳ ಫಳ ಹೊಳೆಯುವ ಗೋಪುರ ಒಂದಿತ್ತು. ಆ ಗೋಪುರ ದೂರದಿಂದಲೇ ಜನಕ್ಕೆ ದೇವಾಲಯದ ಕುರುಹನ್ನು ತೋರುತ್ತಿತ್ತು.

ಒಂದು ದಿನ ಸಂಜೆ ಎಂದಿನಂತೆ ದೇವಸ್ಥಾನದಲ್ಲಿ ಪೂಜೆಯಿತ್ತು. ಪೂಜೆ ಮುಗಿದು ಕತ್ತಲಾಯಿತು. ಭಕ್ತಾದಿಗಳೆಲ್ಲರೂ ದರ್ಶನ ಪಡೆದು, ಸ್ವಲ್ಪ ಹೊತ್ತು ಮೆಟ್ಟಿಲ ಮೇಲೆ ಕುಳಿತು ನಂತರ ಮನೆಗೆ ಹೋದರು. ಪೂಜಾರಿಯೂ ಕೂಡ ದೇವರಿಗೆ ನಮಿಸಿ ದೇವಸ್ಥಾನಕ್ಕೆ ಬೀಗಹಾಕಿ ಮನೆಗೆ ತೆರಳಿದ.



ಕಲೆ : ಶ್ರೀಕಾಂತ

ಗೋಪುರಕ್ಕೆ ಭಾರಿ ಜಂಬ. ಅದು ಮೆಟ್ಟಿಲನ್ನು ಕೂಗಿ, "ಏನೋ, ನೋಡಿದೆಯಾ? ನಾನು ಯಾವಾಗಲೂ ಫಳ ಫಳ ಹೊಳೆಯುತ್ತಿರುತ್ತೇನೆ. ಯಾರೂ ನನ್ನನ್ನು ಮುಟ್ಟಿ ಕೊಳೆ ಮಾಡುವುದಿಲ್ಲ. ಆದರೆ ನೀನು? ನಿನ್ನನ್ನು ತುಳಿದು ಎಲ್ಲರೂ ನಿನ್ನ ಮೇಲೆ ಓಡಾಡುತ್ತಾರೆ. ನಿನ್ನನ್ನು ಗಲೀಜು ಮಾಡುತ್ತಾರೆ" ಎಂದು ಹಂಗಿಸಿತು.

ಅದಕ್ಕೆ ಮೆಟ್ಟಿಲು, " ಅದರಿಂದ ಏನಾಯಿತು? ದೇವರ ದರ್ಶನ ಪಡೆಯುವ ಮೊದಲು ನನ್ನನ್ನು ಮುಟ್ಟಿ 'ಹೇ ರಾಮ!' ಎನ್ನುತ್ತ ಭಕ್ತರು ಒಳಗೆ ಹೋಗುತ್ತಾರೆ. ದರ್ಶನದ ನಂತರವೂ ಮೆಟ್ಟಿಲ ಮೇಲೆ ಕುಳಿತು, ಕೊಂಚಕಾಲ ದೇವರ ಧ್ಯಾನ ಮಾಡುತ್ತಾರೆ. ದೇವಸ್ಥಾನಕ್ಕೆ ಬೀಗ ಹಾಕಿದ್ದರೆ, ನನ್ನನ್ನೇ ಮುಟ್ಟಿ ದೇವರ ನಾಮ ಹೇಳಿ ಸಮಾಧಾನ ಪಡುತ್ತಾರೆ. ಇದರಿಂದ ನನಗೆ ಸಂತೋಷವೇ ಹೊರತು ಖಂಡಿತ ಬೇಜಾರಿಲ್ಲ" ಎಂದಿತು. ಅದಕ್ಕೆ ಗೋಪುರ, "ನೀನು ತಾನೆ ಮತ್ತೇನು ಮಾಡುವೆ? ನಿನಗೆ ನೀನೇ ಸಮಾಧಾನ ಪಟ್ಟುಕೊಳ್ಳಬೇಕು. ನಿನ್ನನ್ನೆಷ್ಟು ಗಲೀಜು ಮಾಡಿಬಿಟ್ಟಿದ್ದಾರೆ ಎಂದು ನಿನ್ನನ್ನು ಒಮ್ಮೆ ನೋಡಿಕೊ" ಎನ್ನುತ್ತಾ ಮತ್ತೆ ಜಂಬ ಕೊಚ್ಚಿಕೊಂಡಿತು.

ಮರುದಿನ ಬೆಳಿಗ್ಗೆ ಭಕ್ತರು ಬರುತ್ತಿದ್ದರು, ಹೋಗುತ್ತಿದ್ದರು. ಯಾವುದೋ ಒಂದು ಕಾಗೆ ಬಂದು ಗೋಪುರದ ಮೇಲೆ ವಿಷ್ಟೆಯನ್ನು ಮಾಡಿತು. ಇದನ್ನು ಮೆಟ್ಟಿಲು ನೋಡಿತು. "ನೋಡಿದೆಯಾ, ನನ್ನನ್ನು ಕುರಿತು ಆಡಿಕೊಳ್ಳುತ್ತಿದ್ದೆ. ಆದರೆ ಈಗ ನಿನ್ನ ಮೇಲೆ ಮಾಡಿರುವ ಹೊಲಸನ್ನು ತೊಳೆಯುವವರು ಯಾರೂ ಇಲ್ಲ. ನನ್ನನ್ನಾದರೋ ದಿನಾ ತೊಳೆಯುತ್ತಾರೆ. ಒಟ್ಟಿನಲ್ಲಿ ನಿನಗೆ ಒದಗಿರುವ ಗತಿ ನನಗೆಂದೂ ಬಂದಿಲ್ಲ" ಎಂದಿತು.

ಮೆಟ್ಟಿಲಿನ ಮಾತು ಕೇಳಿ ಗೋಪುರದ ಜಂಬ ಝುರ್ ಎಂದು ಇಳಿಯಿತು. ಅಪಮಾನದಿಂದ ಮನದೊಳಗೇ ನೊಂದಿತು.

**ಪ್ರಪಂಚದಲ್ಲಿ ಯಾರೂ ಕೀಳಲ್ಲ, ಯಾರೂ ಮೇಲಲ್ಲ. ಯಾರೂ ಯಾರನ್ನೂ ಹಿಯಾಳಿಸಬಾರದು. ಅಹಂಕಾರ ಪಟ್ಟವನಿಗೆ ಅವಮಾನ ತಪ್ಪದು.**

ಸಂಗ್ರಹ : ಶ್ರೀಮತಿ ವಿಜಯಾ ಗೋಪಾಲ ಭಿಡೆ.